# ಭಾರತದ ಸ್ವಾತಂತ್ರ್ಯ ಚಳುವಳಿಯಲ್ಲಿ ಉದಯಿಸಿದ ರಾಜಕೀಯ ಪಕ್ಷಗಳು

**ಪರಶುರಾಮ ಚಂದಪ್ಪ**

ಸಹಾಯಕ ಪ್ರಾಧ್ಯಾಪಕರು, ರಾಜ್ಯಶಾಸ್ತ್ರ ವಿಭಾಗ, ವಿ.ಎಂ.ಕೆ.ಎಸ್.ಆರ್. ವಸ್ತ್ರದ ಕಲಾ, ವಿಜ್ಞಾನ ಹಾಗೂ ವಿ.ಎಸ್. ಬೆಳ್ಳಿಹಾಳ ವಾಣಿಜ್ಯ ಮಹಾವಿದ್ಯಾಲಯ, ಹುನಗುಂದ.

DOI: https://doi.org/10.5281/zenodo.18008104

## ABSTRACT:

ಭಾರತದ ಸ್ವಾತಂತ್ರ್ಯ ಚಳುವಳಿಯ ಸಂದರ್ಭದಲ್ಲಿ ಉದಯಿಸಿದ ಪ್ರಮುಖ ರಾಜಕೀಯ ಪಕ್ಷಗಳ ಹಿನ್ನೆಲೆ, ಉದ್ದೇಶಗಳು ಮತ್ತು ಅವುಗಳ ಪಾತ್ರವನ್ನು ವಿವರಿಸುವುದರೊಂದಿಗೆ ಬ್ರಿಟಿಷರ ಆಡಳಿತದ ವಿರುದ್ಧ ಭಾರತೀಯರಲ್ಲಿ ರಾಜಕೀಯ ಜಾಗೃತಿಯನ್ನು ಮೂಡಿಸುತ್ತ, ಸಂಘಟಿತ ಹೋರಾಟದ ಮಹತ್ವವನ್ನು ತಿಳಿಸುವ ನಿಟ್ಟಿನಲ್ಲಿ ಅನೇಕ ರಾಜಕೀಯ ಪಕ್ಷಗಳು ಹುಟ್ಟಿಕೊಂಡವು. 1885ರಲ್ಲಿ ಉದಯವಾದ ಅಖಿಲ ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ ಸ್ವಾತಂತ್ರ್ಯ ಹೋರಾಟದ ಪ್ರಮುಖ ವೇದಿಕೆಯಾಗಿತ್ತು. ಅದು ದೇಶದಾದ್ಯಂತ ಜನರಲ್ಲಿ ರಾಷ್ಟ್ರೀಯ ಏಕತೆಯನ್ನು ಬೆಳೆಸುವಲ್ಲಿ ಮಹತ್ವದ ಪಾತ್ರವನ್ನು ವಹಿಸಿತು. ನಂತರ ತೀವ್ರವಾದ ರಾಜಕೀಯ ಅಭಿವ್ಯಕ್ತಿಗೆ ಕಾರಣವಾದ 1906ರಲ್ಲಿ ಉದಯವಾದ ಮುಸ್ಲಿಂಲೀಗ್, ಕ್ರಾಂತಿಕಾರಿ ಸಂಘಟನೆಗಳು, ಕಮ್ಯುನಿಷ್ಟ ಪಕ್ಷ, ಹಿಂದೂ ಮಹಾಸಭೆ, ಸ್ವರಾಜ್ಯ ಪಕ್ಷ ಮುಂತಾದ ಪಕ್ಷಗಳು ವಿಭಿನ್ನ ತತ್ವಾಧಾರಗಳೊಂದಿಗೆ ಚಳುವಳಿಯಲ್ಲಿ ಪ್ರವೇಶಿಸಿದವು. ಈ ರಾಜಕೀಯ ಪಕ್ಷಗಳು ಸತ್ಯಾಗ್ರಹ, ಅಸಹಕಾರ ಚಳುವಳಿ, ನಾಗರೀಕ ಅವಿಧೇಯತೆ, ಕ್ರಾಂತಿಕಾರಿ ಚಟುವಟಿಕೆಗಳು ಮತ್ತು ಜನಜಾಗೃತಿ ಕಾರ್ಯಕ್ರಮಗಳ ಮೂಲಕ ಸ್ವಾತಂತ್ರ್ಯ ಹೋರಾಟವನ್ನು ಬಲಪಡಿಸಿದವು. ವಿಭಿನ್ನ ಧೋರಣೆಗಳಿದ್ದರೂ ಇವುಗಳ ಸಮೂಹ ಪ್ರಯತ್ನದ ಫಲವೇ 1947 ಆಗಸ್ಟ್ 15 ರಂದು ಭಾರತ ಸ್ವಾತಂತ್ರ್ಯ ದೊರಕಲು ಕಾರಣವಾಯಿತು ಎಂದು ತಿಳಿಸುವ ಪ್ರಯತ್ನ ಈ ಲೇಖನದ ಮೂಲಕ ಮಾಡಲಾಗಿದೆ.

## KEYWORDS:

ಸ್ವಾತಂತ್ರ್ಯ, ಅಖಿಲ ಭಾರತ ರಾಷ್ಟ್ರೀಯ ಕಾಂಗ್ರೆಸ್, ಅಸಹಕಾರ ಚಳುವಳಿ, ನಾಗರೀಕ ಅವಿಧೇಯ ಚಳುವಳಿ, ಮುಸ್ಲಿಂಲೀಗ್, ಕ್ರಾಂತಿಕಾರಿ ಸಂಘಟನೆಗಳು.

## ಪ್ರಸ್ತಾವನೆ:

ರಾಜಕೀಯ ಪಕ್ಷಗಳು ಪ್ರಜಾಪ್ರಭುತ್ವದ ಬೆನ್ನೆಲುಬುಗಳಾಗಿವೆ. ರಾಜಕೀಯ ಪಕ್ಷಗಳಿಲ್ಲದೆ ಪ್ರಾತಿನಿಧಿಕ ಪ್ರಜಾಪ್ರಭುತ್ವವನ್ನು ಕಲ್ಪಿಸಿಕೊಳ್ಳಲು ಸಾಧ್ಯವಿಲ್ಲ. ರಾಜಕೀಯ ಪಕ್ಷಗಳಿಲ್ಲದ ಪ್ರಜಾಪ್ರಭುತ್ವವೆಂದರೆ ನಾವಿಕನಿಲ್ಲದ ದೋಣಿಯಂತೆ, ಚುಕ್ಕಾಣಿಯಿಲ್ಲದ ಹಡಗಿನಂತೆ, ರಾಜಕೀಯ ಪಕ್ಷಗಳು ವಿಚಾರಗಳ ದಲ್ಲಾಳಿಗಳಿದ್ದ ಹಾಗೆ. ಸರಕಾರ ಮತ್ತು ಜನತೆಯ ಮಧ್ಯ ಸಂಪರ್ಕ ಸೇತುವೆ ಇದ್ದಂತೆ. ಲಾರ್ಡ್ ಬ್ರೈಸ್‌ರವರು “ಸ್ವಾತಂತ್ರ್ಯ ಹೊಂದಿದ ಯಾವ ರಾಷ್ಟ್ರವು ರಾಜಕೀಯ ಪಕ್ಷಗಳಿಲ್ಲದೆ ಅಸ್ತಿತ್ವದಲ್ಲಿರಲಾರದು” ಎಂಬ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ. ಆದ್ದರಿಂದ ಪ್ರಪಂಚದ ಪ್ರತಿಯೊಂದು ರಾಷ್ಟ್ರದಲ್ಲಿ ರಾಜಕೀಯ ಪಕ್ಷಗಳು ಅಸ್ತಿತ್ವದಲ್ಲಿರುವುದನ್ನು ಕಾಣುತ್ತೇವೆ. ಭಾರತವು ಪ್ರಪಂಚದಲ್ಲಿಯೇ ಅತ್ಯಂತ ದೊಡ್ಡ ಪ್ರಜಾಪ್ರಭುತ್ವ ರಾಷ್ಟ್ರವಾಗಿದೆ. ಪ್ರಸ್ತುತ ಭಾರತದಲ್ಲಿ 2900 ರಾಜಕೀಯ ಪಕ್ಷಗಳಿವೆ. ಇದರಲ್ಲಿ ಆರು ರಾಷ್ಟ್ರೀಯ ಪಕ್ಷಗಳು 67 ಪ್ರಾದೇಶಿಕ ಪಕ್ಷಗಳು 2854 ಚುನಾವಣಾ ಆಯೋಗದಲ್ಲಿ ಹೆಸರು ನೋಂದಾಯಿಸಿಕೊಂಡು ಮಾನ್ಯತೆ ಪಡೆಯದೆ ಇರುವ ರಾಜಕೀಯ ಪಕ್ಷಗಳು ಇವೆ.

ಭಾರತದ ಸ್ವಾತಂತ್ರ್ಯ ಪೂರ್ವ ಮತ್ತು ಸ್ವಾತಂತ್ರ್ಯದ ನಂತರ ಅನೇಕ ರಾಜಕೀಯ

ಪಕ್ಷಗಳು ಹುಟ್ಟಿಕೊಂಡು ಭಾರತದ ರಾಜಕೀಯದಲ್ಲಿ ಪ್ರಮುಖ ಪಾತ್ರ ನಿರ್ವಹಿಸುತ್ತಿವೆ. ಹಿಂದಿನ ರಾಜಕೀಯವೇ ಇಂದಿನ ಇತಿಹಾಸವಾಗಿದೆ ಮತ್ತು ಇಂದಿನ ರಾಜಕೀಯವೇ ಮುಂದಿನ ಇತಿಹಾಸವಾಗುತ್ತದೆ. ಭಾರತದ ಸ್ವಾತಂತ್ರ್ಯ ಚಳುವಳಿಯ ಚರಿತ್ರೆಯಲ್ಲಿ ರಾಜಕೀಯ ಪಕ್ಷಗಳ ಪಾತ್ರವನ್ನು ಕಡೆಗಣಿಸುವಂತಿಲ್ಲ.

**ರಾಜಕೀಯ ಪಕ್ಷಗಳ ಅರ್ಥ:**

ರಾಜಕೀಯ ಅಧಿಕಾರವನ್ನು ಪಡೆಯುವ ಉದ್ದೇಶದಿಂದ ಸಂಘಟಿತಗೊಂಡ ಜನಸಮೂಹವನ್ನು ರಾಜಕೀಯ ಪಕ್ಷಗಳು ಎಂದು ಕರೆಯಲಾಗುತ್ತದೆ. ''ಸಾರ್ವಜನಿಕ ವಿಷಯಗಳ ಬಗ್ಗೆ ಒಂದೇ ಅಭಿಪ್ರಾಯವನ್ನು ಹೊಂದಿದ್ದು, ಚುನಾವಣೆಯ ಮೂಲಕ ಅಧಿಕಾರವನ್ನು ಪಡೆಯಲು ಹೋರಾಡುವ ಜನಸಮೂಹವೇ ರಾಜಕೀಯ ಪಕ್ಷ'' ಎಂದು ಸ್ಟಿಫನ್ ಲೀಕಾಕ್ ಎಂಬ ತಜ್ಞರು ವ್ಯಾಖ್ಯಾನಿಸಿದ್ದಾರೆ. ಹಾಗೆಯೇ ಎಡ್ಮಂಡ್ ಬರ್ಕ್ ಅವರು ''ಎಲ್ಲರೂ ಒಪ್ಪಿರುವ ಕೆಲವು ನಿರ್ದಿಷ್ಟ ತತ್ವಗಳ ಆಧಾರದ ಮೇಲೆ ತಮ್ಮ ಸಂಘಟಿತ ಯತ್ನದ ಮೂಲಕ ರಾಷ್ಟ್ರೀಯ ಹಿತಾಸಕ್ತಿಯನ್ನು ವೃದ್ಧಿಗೊಳಿಸಲು ಒಂದಾಗಿರುವ ಜನರ ಸಮುದಾಯವೇ ರಾಜಕೀಯ ಪಕ್ಷ'' ಎಂದು ಹೇಳಿದ್ದಾರೆ. ಭಾರತದ ಸ್ವಾತಂತ್ರ್ಯ ಚಳುವಳಿಯಲ್ಲಿ ಸಂಘ-ಸಂಸ್ಥೆಗಳು ಮತ್ತು ರಾಜಕೀಯ ಪಕ್ಷಗಳು ಸ್ಥಾಪನೆಗೊಂಡು ಬ್ರಿಟಿಷರ ವಿರುದ್ಧದ ಹೋರಾಟದಲ್ಲಿ ಪ್ರಮುಖ ಪಾತ್ರ ನಿರ್ವಹಿಸಿವೆ.

**ಪಕ್ಷ ಪದ್ಧತಿಯ ಪ್ರಕಾರಗಳು:**

**ಪ್ರಪಂಚದಾದ್ಯಂತ ಪಕ್ಷಪದ್ಧತಿಯಲ್ಲಿ ಮೂರು ಪ್ರಕಾರಗಳಿವೆ. ಅವುಗಳು ಈ ಕೆಳಗಿನಂತಿವೆ,**

**1. ಏಕ ಪಕ್ಷಪದ್ಧತಿ:** ಒಂದು ರಾಷ್ಟ್ರದ ರಾಜಕೀಯ ವ್ಯವಸ್ಥೆಯಲ್ಲಿ ಒಂದೇ ಒಂದು ರಾಜಕೀಯ ಪಕ್ಷ ಪ್ರಮುಖ ಪಾತ್ರ ನಿರ್ವಹಿಸುತ್ತಿದ್ದರೆ ಅದನ್ನು ಏಕ ಪಕ್ಷ ಪದ್ಧತಿ ಎಂದು ಕರೆಯಲಾಗುತ್ತದೆ. ಉದಾಹರಣೆಗೆ ಚೀನಾ, ಚೀನಾದಲ್ಲಿ ಕಮ್ಯೂನಿಸ್ಟ್ ಪಾರ್ಟಿ ಆಫ್ ಚೀನಾ (CPC) ಎಂಬ ಒಂದೇ ರಾಜಕೀಯ ಪಕ್ಷ ಇದೆ.

**2. ದ್ವಿ-ಪಕ್ಷ ಪದ್ಧತಿ:** ಒಂದು ರಾಷ್ಟ್ರದ ರಾಜಕೀಯ ವ್ಯವಸ್ಥೆಯಲ್ಲಿ ಎರಡು ರಾಜಕೀಯ ಪಕ್ಷಗಳು ಅಂದರೆ ಒಂದು ಆಡಳಿತ ಪಕ್ಷ ಇನ್ನೊಂದು ವಿರೋಧ ಪಕ್ಷ ಎರಡು ರಾಜಕೀಯ ಪಕ್ಷಗಳು ಪ್ರಮುಖ ಪಾತ್ರ ನಿರ್ವಹಿಸುವಂತಿದ್ದರೆ ಅದನ್ನು ದ್ವಿಪಕ್ಷ ಪದ್ಧತಿ ಎಂದು ಕರೆಯುತ್ತಾರೆ. ಉದಾಹರಣೆಗೆ ಇಂಗ್ಲೆಂಡ್ ಮತ್ತು ಅಮೇರಿಕಾ. (ಇಂಗ್ಲೆಂಡ್‌ನಲ್ಲಿ ಕನ್ಸರ್ವೇಟಿವ್ ಮತ್ತು ಲೇಬರ್ ಪಕ್ಷ ಎಂಬ ಎರಡು ರಾಜಕೀಯ ಪಕ್ಷಗಳಿವೆ, ಹಾಗೆಯೇ ಅಮೇರಿಕಾದಲ್ಲಿ ರಿಪಬ್ಲಿಕ್ ಮತ್ತು ಡೆಮಾಕ್ರಟಿಕ್ ಎಂಬ ಎರಡು ರಾಜಕೀಯ ಪಕ್ಷಗಳಿವೆ.)

**3. ಬಹುಪಕ್ಷ ಪದ್ಧತಿ:** ಒಂದು ರಾಷ್ಟ್ರದ ರಾಜಕೀಯ ವ್ಯವಸ್ಥೆಯಲ್ಲಿ ಎರಡಕ್ಕಿಂತ ಹೆಚ್ಚು ಅಂದರೆ ಮೂರು ಅಥವಾ ಮೂರಕ್ಕಿಂತ ಹೆಚ್ಚು ರಾಜಕೀಯ ಪಕ್ಷಗಳು ಪ್ರಮುಖ ಪಾತ್ರ ನಿರ್ವಹಿಸುವಂತಿದ್ದರೆ ಅದನ್ನು ಬಹುಪಕ್ಷ ಪದ್ಧತಿ ಎಂದು ಕರೆಯುತ್ತಾರೆ. ಉದಾಹರಣೆಗೆ ಭಾರತ. ಭಾರತದಲ್ಲಿ ಸ್ವಾತಂತ್ರ್ಯ ಪೂರ್ವ ಮತ್ತು ಸ್ವಾತಂತ್ರ್ಯ ನಂತರ ಭಾರತದ ವಿವಿಧತೆ ಮತ್ತು ವೈವಿಧ್ಯತೆಗೆ ಅನುಗುಣವಾಗಿ ಅನೇಕ ರಾಜಕೀಯ ಪಕ್ಷಗಳು ಹುಟ್ಟಿ ಬೆಳೆದು ಬಂದಿವೆ. ಆದ್ದರಿಂದ ಭಾರತವು ಬಹು ಪಕ್ಷ ಪದ್ಧತಿಗೆ ಸ್ಪಷ್ಟ ಉದಾಹರಣೆಯಾಗಿದೆ.

**ಭಾರತದಲ್ಲಿ ವೈವಿಧ್ಯಮಯ ರಾಜಕೀಯ ಪಕ್ಷಗಳು:**

ಭಾರತವು ಸಮ್ಮಿಶ್ರ ಸಂಸ್ಕೃತಿಯ ಶ್ರೀಮಂತ ಪರಂಪರೆಯನ್ನು ಹೊಂದಿದ ರಾಷ್ಟ್ರವಾಗಿದೆ.

ಭಾರತದಲ್ಲಿ ಧರ್ಮ, ಜಾತಿ, ಭಾಷೆ, ಆಚಾರ–ವಿಚಾರಗಳು ವೈವಿಧ್ಯಮಯವಾಗಿವೆ. ಭಾರತದ ಸ್ವಾತಂತ್ರ್ಯ ಚಳುವಳಿಯ ಸಮಯದಲ್ಲಿಯೇ ಅನೇಕ ರಾಜಕೀಯ ಪಕ್ಷಗಳು ಭಾರತೀಯ ವೈವಿಧ್ಯತೆಗೆ ಅನುಗುಣವಾಗಿ ಹುಟ್ಟಿ ಬೆಳೆದು ಬಂದಿವೆ. ಭಾರತದಲ್ಲಿಯ ಜಾತಿ, ಧರ್ಮ, ಭಾಷೆ, ಪ್ರದೇಶ ಮತ್ತು ಸೈದ್ಧಾಂತಿಕ ನೆಲೆಗಟ್ಟಿನ ಮೇಲೆ ಬಲಪಂಥೀಯ, ಎಡಪಂಥೀಯ, ರಾಷ್ಟ್ರೀಯ, ಪ್ರಾದೇಶಿಕ, ಕೋಮುವಾದಿ ರಾಜಕೀಯ ಪಕ್ಷಗಳು ಎಂದು ವಿಭಿನ್ನಮಯವಾದ ಸ್ವರೂಪ ಪಡೆದುಕೊಂಡಿವೆ.

**1. ಬಲಪಂಥೀಯ ಪಕ್ಷಗಳು:** ತೀವ್ರತರ ಬದಲಾವಣೆಯನ್ನು ಬಯಸದೆ ಯಥಾಸ್ಥಿತಿಯನ್ನು ಕಾಪಾಡಿಕೊಂಡು ಹೋಗುವ ಮನೋಭಾವನೆಯನ್ನು ಹೊಂದಿರುವ ರಾಜಕೀಯ ಪಕ್ಷಗಳನ್ನು ಬಲಪಂಥೀಯ ಪಕ್ಷಗಳು ಎಂದು ಕರೆಯುತ್ತಾರೆ. ಉದಾ: ರಾಷ್ಟ್ರೀಯ ಕಾಂಗ್ರೆಸ್, ಭಾರತೀಯ ಜನತಾ ಪಾರ್ಟಿ.

**2. ಎಡಪಂಥೀಯ ಪಕ್ಷಗಳು:** ಆರ್ಥಿಕ, ಸಾಮಾಜಿಕ ಮತ್ತು ರಾಜಕೀಯ ಕ್ಷೇತ್ರಗಳಲ್ಲಿ ಕ್ರಾಂತಿಯ ಮೂಲಕ ತೀವ್ರತರ ಬದಲಾವಣೆಯನ್ನು ಬಯಸುವ ರಾಜಕೀಯ ಪಕ್ಷಗಳನ್ನು ಎಡಪಂಥೀಯ ಪಕ್ಷಗಳು ಎಂದು ಕರೆಯಲಾಗುತ್ತದೆ. ಉದಾ: ಕಮ್ಯೂನಿಸ್ಟ್ ಮತ್ತು ಸಮಾಜವಾದಿ ಪಕ್ಷಗಳು.

**3. ರಾಷ್ಟ್ರೀಯ ಪಕ್ಷಗಳು:** ಏಕತೆ, ಸಮಗ್ರತೆ, ಸಾರ್ವಭೌಮತೆ, ಮುಂತಾದ ರಾಷ್ಟ್ರೀಯ ಮಹತ್ವವುಳ್ಳ ವಿಷಯಗಳಿಗೆ ಹೆಚ್ಚು ಆದ್ಯತೆ ನೀಡಿ, ರಾಷ್ಟ್ರದಾದ್ಯಂತ ಗುರುತಿಸಿಕೊಂಡ ರಾಜಕೀಯ ಪಕ್ಷಗಳನ್ನು ರಾಷ್ಟ್ರೀಯ ಪಕ್ಷಗಳು ಎಂದು ಕರೆಯಲಾಗುತ್ತದೆ. (ಸ್ವಾತಂತ್ರ್ಯ ನಂತರ ಚುನಾವಣಾ ಆಯೋಗ ಮಾನ್ಯತೆ ನೀಡುತ್ತದೆ.)

**4. ಪ್ರಾದೇಶಿಕ ಪಕ್ಷಗಳು:** ನೆಲ, ಜಲ, ಭಾಷೆ, ಸ್ಥಳೀಯರಿಗೆ ಉದ್ಯೋಗ ಮುಂತಾದ ಪ್ರಾದೇಶಿಕ ವಿಷಯಗಳಿಗೆ ಮಹತ್ವ ನೀಡುವ ರಾಜಕೀಯ ಪಕ್ಷಗಳನ್ನು ಪ್ರಾದೇಶಿಕ ಪಕ್ಷಗಳು ಎಂದು ಕರೆಯಲಾಗುತ್ತದೆ. (ಸ್ವಾತಂತ್ರ್ಯ ನಂತರ ಚುನಾವಣಾ ಆಯೋಗ ಮಾನ್ಯತೆ ನೀಡುತ್ತದೆ.)

**5. ಕೋಮುವಾದಿ ಪಕ್ಷಗಳು:** ಜಾತಿ ಮತ್ತು ಧರ್ಮದ ಹೆಸರಿನ ಮೇಲೆ ರಾಜಕಾರಣ ಮಾಡುವ ರಾಜಕೀಯ ಪಕ್ಷಗಳನ್ನು ಕೋಮುವಾದಿ ಪಕ್ಷಗಳು ಎಂದು ಕರೆಯಲಾಗುತ್ತದೆ. ಉದಾ: ಮುಸ್ಲಿಂ ಲೀಗ್ ಮತ್ತು ಹಿಂದೂ ಮಹಾಸಭಾ.

**ಭಾರತದ ಸ್ವಾತಂತ್ರ್ಯ ಚಳುವಳಿಯಲ್ಲಿ ಉದಯಿಸಿದ ರಾಜಕೀಯ ಪಕ್ಷಗಳು:**

ಭಾರತದ ವೈವಿಧ್ಯತೆಗೆ ಅನುಗುಣವಾಗಿ ಸ್ವಾತಂತ್ರ್ಯಪೂರ್ವದಲ್ಲಿ ಅನೇಕ ಸಂಘ–ಸಂಸ್ಥೆಗಳು, ಪತ್ರಿಕೆಗಳು, ಸಭಾ–ಸಮಿತಿಗಳು, ಸಮಾಜಗಳು, ಮಿಲಿಟರಿ ಕೂಟಗಳು ಮತ್ತು ರಾಜಕೀಯ ಪಕ್ಷಗಳು ಉದಯಿಸಿ ಬ್ರಿಟಿಷರ ವಿರುದ್ಧದ ಭಾರತೀಯ ಸ್ವಾತಂತ್ರ್ಯ ಚಳುವಳಿಯಲ್ಲಿ ಭಾಗವಹಿಸಿದ್ದವು. ಸ್ವಾತಂತ್ರ್ಯ ಪೂರ್ವ ಭಾರತದಲ್ಲಿ ರಾಜಕೀಯ ಪಕ್ಷಗಳ ಉಗಮಕ್ಕೆ ಅವಕಾಶವೇ ಇದ್ದಿರಲಿಲ್ಲ. ಆದರೆ, ಸ್ಥಳೀಯ ಸಂಘ–ಸಂಸ್ಥೆಗಳೋಪಾದಿಯಲ್ಲಿ ಜನ್ಮವೆತ್ತಿಕೊಂಡು ಬೆಳೆದು ನಂತರ ರಾಜಕೀಯ ಪಕ್ಷಗಳ ಸ್ವರೂಪ ಪಡೆದುಕೊಂಡವು. ಅವುಗಳಲ್ಲಿ ಪ್ರಮುಖವಾದವುಗಳನ್ನು ನೋಡಬಹುದಾಗಿದೆ.

**ರಾಷ್ಟ್ರೀಯ ಕಾಂಗ್ರೆಸ್ ಪಕ್ಷ (1885):**

ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ ಇದು ಅತ್ಯಂತ ಹಳೆಯ ಮತ್ತು ಸ್ವಾತಂತ್ರ್ಯ ಚಳುವಳಿಯಲ್ಲಿ ನಿರ್ಣಾಯಕ ಪಾತ್ರ ವಹಿಸಿದ ಪಕ್ಷವಾಗಿದೆ. ಲಾರ್ಡ್ ಡಫರಿನ್ ಭಾರತದ

ವೈಸ್‌ರಾಯ್‌ರಾಗಿದ್ದ ಕಾಲದಲ್ಲಿ ಅಲೆನ್ ಆಕ್ಟೇವಿಯನ್ ಹ್ಯೂಮ್ ಭಾರತ ಸರಕಾರದ ಮುಖ್ಯ ಕಾರ್ಯದರ್ಶಿಗಳಾಗಿದ್ದರು. ಅವರು 1883ರಲ್ಲಿ ಕಲಕತ್ತಾ ವಿಶ್ವವಿದ್ಯಾಲಯದ ಪದವೀಧರರಿಗೊಂದು ಪತ್ರ ಬರೆದು ರಾಷ್ಟ್ರ ನಿರ್ಮಾಣದಲ್ಲಿ ಸಾಮಾಜಿಕ ಸುಧಾರಣೆಗಳನ್ನು ಮಾಡಲು ಯುವಕರು ಮುಂದಾಗಬೇಕೆಂದೂ ಹಾಗೂ ಯುವಕರು ಮುಂದೆ ಬಂದರೆ, ತಾವೂ ಆ ದಿಸೆಯಲ್ಲಿ ಸಹಾಯ ಮಾಡುವುದಾಗಿ ಭರವಸೆ ನೀಡಿದರು. ಇದಕ್ಕೆ ಪ್ರೇರಣೆಗೊಂಡು ದೇಶದ ನಾನಾ ಭಾಗಗಳಿಂದ ಯುವಕರು ಮುಂದೆ ಬಂದರು. ಇದರ ಪ್ರಥಮ ಸಮ್ಮೇಳನವು 1885 ಡಿಸೆಂಬರ್ 27 ರಂದು ಮುಂಬಯಿಯಲ್ಲಿ ನಡೆಯಿತು. ಉಮೇಶಚಂದ್ರ ಬ್ಯಾನರ್ಜಿ ಅಧ್ಯಕ್ಷತೆ ವಹಿಸಿದ್ದರು. ಭಾರತದ ಸ್ವಾತಂತ್ರ್ಯ ಚಳುವಳಿಯ ಮುಂಚೂಣಿಯಲ್ಲಿದ್ದ ರಾಷ್ಟ್ರೀಯ ಕಾಂಗ್ರೆಸ್ ಸ್ವಾತಂತ್ರ್ಯ ಪೂರ್ವದಲ್ಲಿ ಎ.ಓ. ಹ್ಯೂಮ್, ಡಬ್ಲ್ಯೂ.ಸಿ. ಬ್ಯಾನರ್ಜಿ, ದಾದಾ ಬಾಯಿ ನವರೋಜಿ, ಫಿರೋಜ್‌ಶಾ ಮೆಹ್ತಾ, ಗೋಪಾಲಕೃಷ್ಣ ಗೋಖಲೆ, ಮದನ ಮೋಹನ ಮಾಳವೀಯ, ಬದ್ರುದ್ದೀನ್ ತಯಾಬ್ಜಿ, ಮನ್ ಮೋಹನ ಘೋಷ್, ಲಾಲ್ ಮೋಹನ್ ಘೋಷ್, ಸುರೇಂದ್ರನಾಥ ಸೇನ್, ಎಂ.ಜಿ. ರಾನಡೆ, ಕೆ.ಟಿ. ತೆಲಾಂಗ್, ಎಸ್. ಸುಬ್ರಮಣ್ಯ ಅಯ್ಯರ್, ನಂತರ ಮಹಾತ್ಮ ಗಾಂಧಿ, ಸರ್ದಾರ್ ವಲ್ಲಭಾಯಿ ಪಟೇಲ್, ಸುಭಾಷ್ ಚಂದ್ರ ಬೋಸ್, ಜವಾಹರಲಾಲ್ ನೆಹರು ಮುಂತಾದ ರಾಷ್ಟ್ರೀಯ ನಾಯಕರು ಕಾಂಗ್ರೆಸ್‌ನ ಸದಸ್ಯರಾಗಿದ್ದರು.

ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ 1885 ರಲ್ಲಿ ಸ್ಥಾಪನೆಯೊಂದಿಗೆ ಆರಂಭವಾದ ಸ್ವಾತಂತ್ರ್ಯ ಚಳುವಳಿಯು ಭಾರತ ಸ್ವಾತಂತ್ರ್ಯ ಪಡೆಯುವವರೆಗೆ ಅಂದರೆ 1947 ಆಗಸ್ಟ್ 15 ರವರೆಗೆ ಮುಂದುವರೆಯಿತು. ಪ್ರಾರಂಭದಲ್ಲಿ ಸೌಮ್ಯವಾದಿಗಳು ಭಾರತೀಯರ ಸಮಸ್ಯೆಗಳು ಮತ್ತು ಬೇಡಿಕೆಗಳನ್ನು ನಿವೇದನೆ, ವಿನಂತಿ, ಠರಾವು, ಪ್ರಚಾರ ಮುಂತಾದ ಸಂವಿಧಾನಾತ್ಮಕ ಮಾರ್ಗಗಳ ಮೂಲಕ ಬ್ರಿಟಿಷರ ಗಮನ ಸೆಳೆದರು. ನಂತರ ತೀವ್ರವಾದಿಗಳು ಸ್ವರಾಜ್ಯವನ್ನು ಪಡೆಯಲು ಐಕ್ಯತೆ, ದೇಶಪ್ರೇಮ, ತ್ಯಾಗ-ಬಲಿದಾನಗಳೊಂದಿಗೆ ಮುಷ್ಕರ, ಪ್ರತಿಭಟನೆ, ಬಹಿಷ್ಕಾರ ಮುಂತಾದ ಆಕ್ರಮಣಕಾರಿ ವಿಧಾನಗಳಲ್ಲಿ ಭಾಗಿಯಾಗಿದ್ದರು. ಕ್ರಾಂತಿಕಾರಿಗಳು ಬ್ರಿಟಿಷರ ವಿರುದ್ಧ ನೇರವಾಗಿ ಸಂಘರ್ಷಕ್ಕಿಳಿದರು. ಹೀಗೆ ಭಾರತೀಯ ಕಾಂಗ್ರೆಸ್ ನೇತೃತ್ವದಲ್ಲಿ ಸ್ವದೇಶಿ ಚಳುವಳಿ, ಕ್ರಾಂತಿಕಾರಿ ಚಳುವಳಿ, ಚಂಪಾರಣ್ಯ ಸತ್ಯಾಗ್ರಹ (1917), ಅಹಮದಾಬಾದ್ ಮಿಲ್ ಮುಷ್ಕರ (1918), ರೌಲತ್ ಕಾಯ್ದೆಯ ವಿರುದ್ಧ ಹೋರಾಟ (1919), ಜಲಿಯನ್ ವಾಲಾಬಾಗ್ ಹತ್ಯಾಕಾಂಡದ ವಿರುದ್ಧದ ಹೋರಾಟ, ಅಸಹಕಾರ ಚಳುವಳಿ (1920), ಸೈಮನ್ ಕಮೀಷನ್‌ಗೆ ವಿರೋಧ (1928), ಕಾನೂನು ಭಂಗ ಚಳುವಳಿ (1930), ಭಾರತ ಬಿಟ್ಟು ತೊಲಗಿ ಚಳುವಳಿ (1942) ಮುಂತಾದ ನಿರ್ಣಾಯಕ ಹೋರಾಟಗಳನ್ನು ಸಂಘಟಿಸಿ ಪ್ರತಿಭಟಿಸಿತು.

ಭಾರತದ ಸ್ವಾತಂತ್ರ್ಯ ಚಳುವಳಿಯಲ್ಲಿ ಬ್ರಿಟಿಷರ ವಿರುದ್ಧ ರಾಷ್ಟ್ರೀಯ ಕಾಂಗ್ರೆಸ್ ಪ್ರಾರಂಭದಲ್ಲಿ ನಿವೇದನೆ, ವಿನಂತಿಯ ಮೂಲಕ ಪ್ರಾರಂಭಿಸಿ, ಸತ್ಯ, ಅಹಿಂಸೆ, ಸತ್ಯಾಗ್ರಹದಂತಹ ತಂತ್ರಗಳನ್ನು ಬಳಸಿ ಕೊನೆಗೆ 'ಮಾಡು ಇಲ್ಲವೇ ಮಡಿ' ಎಂಬ ಘೋಷಣೆಯೊಂದಿಗೆ ಚಳುವಳಿಯನ್ನು ತೀವ್ರಗೊಳಿಸಿತು. ಇದರ ಪ್ರಯುಕ್ತ ಬ್ರಿಟಿಷರು ತಮ್ಮ ಒಡೆದಾಳುವ ನೀತಿಯ ಮೂಲಕ ಭಾರತವನ್ನು ಇಬ್ಭಾಗಿಸಿ 1947 ರಲ್ಲಿ ಕಾನೂನಾತ್ಮಕವಾಗಿ ಸ್ವಾತಂತ್ರ್ಯವನ್ನು ಘೋಷಿಸಿದರು. ಭಾರತದ ಸ್ವಾತಂತ್ರ್ಯ ನಂತರ ಮಹಾತ್ಮಾ ಗಾಂಧೀಜಿಯವರು "ರಾಷ್ಟ್ರೀಯ ಕಾಂಗ್ರೆಸ್ ಪಕ್ಷವು ಬ್ರಿಟಿಷರ ವಿರುದ್ಧ ಹೋರಾಟಕ್ಕಾಗಿ ಹುಟ್ಟಿದ ಚಳುವಳಿ; ಕಾಂಗ್ರೆಸ್ ತನ್ನ ಮೂಲ ಗುರಿಯನ್ನು ಸಾಧಿಸಿದೆ; ಈಗ ಅದರ ಕೆಲಸ ಮುಗಿದಿದೆ. ಅದನ್ನು ವಿಸರ್ಜಿಸಿರಿ"

ಎಂದು ಸಲಹೆ ನೀಡಿದ್ದರು. ಆದರೆ, ರಾಷ್ಟ್ರೀಯ ಕಾಂಗ್ರೆಸ್ ಪಕ್ಷ ಸ್ವತಂತ್ರ ಭಾರತದಲ್ಲಿ ಏಕ ಪಕ್ಷದ ಪ್ರಾಬಲ್ಯದೊಂದಿಗೆ ಮುಂದುವರೆಯಿತು. ಪ್ರಸ್ತುತ ಏಕ ಪಕ್ಷದ ಪ್ರಾಬಲ್ಯ ಅಂತ್ಯಗೊಂಡು ತನ್ನ ಅಸ್ತಿತ್ವಕ್ಕಾಗಿ ಪ್ರಯತ್ನಿಸುತ್ತಿದೆ.

**ಮುಸ್ಲಿಂ ಲೀಗ್ (1906):**

ಬ್ರಿಟಿಷ್ ಭಾರತದಲ್ಲಿ ಮುಸ್ಲಿಂ ಸಮುದಾಯದ ಹಿತಾಸಕ್ತಿಗಳ ರಕ್ಷಣೆಗಾಗಿ ಅಖಿಲ ಭಾರತ ಮುಸ್ಲಿಂ ಲೀಗ್‌ನ್ನು, 1906 ಡಿಸೆಂಬರ್ 30 ರಂದು ಢಾಕಾದಲ್ಲಿ ನವಾಬ್ ಖ್ವಾಜಾ ಸಲೀಮುಲ್ಲಾ, ಹಕೀಮ್ ಅಜ್ಮಲ್ ಖಾನ್ ಮತ್ತು ಇತರೆ ಮುಸ್ಲಿಂ ನಾಯಕರ ನೇತೃತ್ವದಲ್ಲಿ ಸ್ಥಾಪನೆಯಾಯಿತು. ಆಲ್ ಇಂಡಿಯಾ ಮುಸ್ಲಿಂ ಲೀಗ್ ಭಾರತದ ಮೊದಲ ಮುಸ್ಲಿಂ ರಾಜಕೀಯ ಪಕ್ಷವಾಗಿದ್ದು, ಸರ್ ಆಗಾ ಖಾನ್ ಮುಸ್ಲಿಂ ಲೀಗ್‌ನ ಮೊದಲ ಅಧ್ಯಕ್ಷರಾಗಿ ಕಾರ್ಯನಿರ್ವಹಿಸಿದರು. ಭಾರತದ ಸ್ವಾತಂತ್ರ್ಯ ಚಳುವಳಿಯಲ್ಲಿ ಮುಸ್ಲಿಂ ಲೀಗ್ ಪ್ರಮುಖ ಪಾತ್ರವಹಿಸಿದೆ. ಆದರೆ, ಅದರ ಧೋರಣೆಗಳು ಹಿಂದೂ ಮಹಾಸಭಾ ಮತ್ತು ಕಾಂಗ್ರೆಸ್ ಪಕ್ಷಗಳಿಗಿಂತ ಭಿನ್ನವಾಗಿದ್ದವು. ಮುಸ್ಲಿಂ ಲೀಗ್ ಪ್ರಾರಂಭದಲ್ಲಿ ಮುಸ್ಲಿಂ ಸಮುದಾಯದ ರಾಜಕೀಯ, ಸಾಮಾಜಿಕ ಹಕ್ಕುಗಳು ಮತ್ತು ರಾಜಕೀಯ ಪ್ರಾತಿನಿಧಿತ್ವವನ್ನು ಪಡೆಯಲು ಸಹಕಾರದ ರಾಜಕೀಯವನ್ನು ಅನುಸರಿಸಿತು. ಬ್ರಿಟಿಷರ ವಿರುದ್ಧ ನೇರವಾಗಿ ಹೋರಾಡದೆ, ತಮ್ಮ ಹಕ್ಕುಗಳನ್ನು ಸಂವಿಧಾನಬದ್ಧವಾಗಿ ಪಡೆಯಲು ಪ್ರಯತ್ನಿಸಿತು.

ಭಾರತದ ಸ್ವಾತಂತ್ರ್ಯ ಚಳುವಳಿಯ ಸಮಯದಲ್ಲಿ ಬ್ರಿಟಿಷರ ಒಡೆದಾಳುವ ನೀತಿಯ ಮಧ್ಯೆ 1916ರ ಲಖ್ನೋ ಸಮ್ಮೇಳನದಲ್ಲಿ ಭಾರತೀಯ ಕಾಂಗ್ರೆಸ್ ಮತ್ತು ಮುಸ್ಲಿಂ ಲೀಗ್ ಇವುಗಳ ನಡುವೆ ಪ್ರಥಮ ರಾಜಕೀಯ ಸಹಕಾರ ಏರ್ಪಟ್ಟಿತು ಮತ್ತು ಅಲ್ಪಮತ ಬಹುಮತ ಸಮನ್ವಯ ತತ್ವಗಳಿಗೆ ಮನ್ನಣೆ ದೊರೆಯಿತು. ಭಾರತದ ಸ್ವರಾಜ್ಯಕ್ಕಾಗಿ ಹಿಂದೂ-ಮುಸ್ಲಿಂರ ಮಧ್ಯೆ ಸಾಮರಸ್ಯ ಉಂಟಾಗಿ ಬ್ರಿಟಿಷರ ವಿರುದ್ಧ ಸಂಯುಕ್ತ ಹೋರಾಟಕ್ಕೆ ತಯಾರಾಗಿದ್ದವು. ಅಷ್ಟೇ ಅಲ್ಲ ಅಸಹಕಾರ ಮತ್ತು ಖಿಲಾಫತ್ ಚಳುವಳಿಯ (1920-22) ಸಮಯದಲ್ಲಿ ಬ್ರಿಟಿಷ್ ಆಳ್ವಿಕೆಯ ವಿರುದ್ಧದ ಪ್ರತಿಭಟನೆ ಮತ್ತು ಮುಷ್ಕರಗಳಲ್ಲಿ ಮುಸ್ಲಿಂರು ಭಾಗವಹಿಸುವುದರ ಮೂಲಕ ಸ್ವಾತಂತ್ರ್ಯ ಚಳುವಳಿಯಲ್ಲಿ ಒಗ್ಗಟ್ಟನ್ನು ಪ್ರದರ್ಶಿಸಿದರು. ಮಹಾತ್ಮಾ ಗಾಂಧೀಜಿ ಅವರ ನಾಯಕತ್ವದ ಹೋರಾಟದಲ್ಲಿ ಮುಸ್ಲಿಂರು ಜಾತ್ಯತೀತ ಮತ್ತು ರಾಷ್ಟ್ರೀಯತೆಯ ಆಧಾರದ ಮೇಲೆ ಭಾರತದ ಸ್ವಾತಂತ್ರ್ಯ ಚಳುವಳಿಯಲ್ಲಿ ಭಾಗವಹಿಸಿದರು. ಭಾರತದ ಚಳುವಳಿಯಲ್ಲಿ ಮುಸ್ಲಿಂರ ಪಾತ್ರ ಅನನ್ಯವಾಗಿತ್ತು ಎನ್ನುವುದರಲ್ಲಿ ಎರಡು ಮಾತಿಲ್ಲ. ಮುಸ್ಲಿಂ ನಾಯಕರು, ಪಂಡಿತರು, ಕ್ರಾಂತಿಕಾರಿಗಳು, ಮಹಿಳೆಯರು ಸಾಮಾನ್ಯ ಜನರೂ ಬ್ರಿಟಿಷರ ವಿರುದ್ಧದ ಹೋರಾಟದಲ್ಲಿ ಪಾಲ್ಗೊಂಡು ತ್ಯಾಗ ಬಲಿದಾನಗಳೊಂದಿಗೆ ದೇಶದ ಸ್ವಾತಂತ್ರ್ಯಕ್ಕೆ ತಮ್ಮದೇ ಆದ ಕೊಡುಗೆಗಳನ್ನು ನೀಡಿದ್ದಾರೆ. ಆದರೆ, ಮುಸ್ಲಿಂ ಲೀಗ್ ಆರಂಭದಲ್ಲಿ ಕಾಂಗ್ರೆಸ್‌ನೊಂದಿಗೆ ಸಹಕರಿಸಿದ್ದರೂ ನಂತರದ ದಿನಗಳಲ್ಲಿ ತಮ್ಮ ರಾಜಕೀಯ ಬೇಡಿಕೆಗಳಿಗಾಗಿ ಬ್ರಿಟಿಷರೊಂದಿಗೆ ಹೊಂದಾಣಿಕೆ ಮತ್ತು ಹೋರಾಟ ಎರಡರಲ್ಲಿ ಸ್ವತಂತ್ರವಾಗಿ ಭಾಗವಹಿಸಿತು. ಮುಸ್ಲಿಂ ಲೀಗ್ ಭಾರತದ ಸ್ವಾತಂತ್ರ್ಯ ಹೋರಾಟದ ಅಂತಿಮ ಹಂತದಲ್ಲಿ ದೇಶ ವಿಭಜನೆಯ ಮೂಲಕ ನಿರ್ಣಾಯಕ ಪಾತ್ರ ವಹಿಸಿತು. ಏಕೆಂದರೆ, ಮುಸ್ಲಿಂ ಲೀಗ್‌ನ ನೇತಾರ ಮಹಮ್ಮದ್ ಆಲಿ ಜಿನ್ನಾ ಅವರು ಪ್ರಸ್ತಾಪಿಸಿದ ದ್ವಿ-ರಾಷ್ಟ್ರ ಸಿದ್ಧಾಂತವು ಭಾರತದ ವಿಭಜನೆಯೊಂದಿಗೆ ಪ್ರತ್ಯೇಕ ಪಾಕಿಸ್ತಾನ ರಚನೆಗೆ ಕಾರಣವಾಯಿತು.

**ಗಾದರ್ ಪಕ್ಷ (1913):**

ಹಿಂಸಾತ್ಮಕ ಕ್ರಾಂತಿಯ ಮೂಲಕ ಭಾರತದಲ್ಲಿಯ ಬ್ರಿಟಿಷರ ಆಡಳಿತವನ್ನು ಕೊನೆಗಾಣಿಸುವುದು, ದೇಶಭಕ್ತರನ್ನು ಒಂದುಗೂಡಿಸುವುದು, ಭಾರತದಲ್ಲಿಯ ಕ್ರಾಂತಿಕಾರಿಗಳಿಗೆ ಹಣ ಮತ್ತು ಶಸ್ತ್ರಾಸ್ತ್ರಗಳ ಮೂಲಕ ಬೆಂಬಲ ನೀಡುವ ಉದ್ದೇಶದಿಂದ ಭಾರತೀಯ ವಲಸೆ ಕ್ರಾಂತಿಕಾರಿಗಳು ಕೆನಡಾದಲ್ಲಿ ಗಾದರ್ ಪಾರ್ಟಿಯನ್ನು 1913 ರಲ್ಲಿ ಸ್ಥಾಪಿಸಿದರು. ಇದು ಭಾರತೀಯ ಸ್ವಾತಂತ್ರ್ಯಕ್ಕಾಗಿ ವಿದೇಶದಲ್ಲಿ ಆರಂಭವಾದ ಕ್ರಾಂತಿಕಾರಿ ರಾಜಕೀಯ ಚಳುವಳಿಯಾಗಿತ್ತು. ಅಮೇರಿಕಾ ಮತ್ತು ಕೆನಡಾದಲ್ಲಿ ವಲಸೆ ಹೋದ (ಸಿಖ್, ಹಿಂದೂ, ಮುಸ್ಲಿಂ ಸಮುದಾಯದ) ಭಾರತೀಯರು ಗಾದರ್ ಪಕ್ಷದ ಮೂಲಕ ವಿದೇಶಿ ನೆಲದಲ್ಲಿ ಸ್ವಾತಂತ್ರ್ಯ ಚಳುವಳಿಯನ್ನು ಆರಂಭಿಸಿದ್ದರು. ಲಾಲ್ ಹರ್ ದಯಾಳ್, ಸೋಹನ್ ಸಿಂಗ್ ಭಕ್ಕನಾ, ಪಂಡಿತ್ ಕೃಪಲಾನಿ, ಕರುತಾರ್ ಸಿಂಗ್ ಸರಭಾ, ರಸ್ವೀರ್ ಸಿಂಗ್, ಭಗವಾನ್ ಸಿಂಗ್, ತರಕ್ ನಾಥ್ ದಾಸ್ ಮುಂತಾದ ಚಿಂತಕರು ಮತ್ತು ಕ್ರಾಂತಿಕಾರಿಗಳು ಗಾದರ್ ಪಕ್ಷದ ನೇತಾರರಾಗಿದ್ದರು. ಗಾದರ್ ಪತ್ರಿಕೆ ಭಾರತದ ಸ್ವಾತಂತ್ರ್ಯಕ್ಕಾಗಿ ವಿದೇಶದಿಂದ ಪ್ರಕಟವಾದ ಮೊದಲ ಕ್ರಾಂತಿಕಾರಿ ಪತ್ರಿಕೆಯಾಗಿದೆ. ಇದು ಪಂಜಾಬಿ, ಉರ್ದು, ಹಿಂದಿ, ಇಂಗ್ಲಿಷ್ ಮುಂತಾದ ಭಾಷೆಗಳಲ್ಲಿ ಪ್ರಕಟವಾಗಿ ಭಾರತದಲ್ಲಿ ಬ್ರಿಟಿಷ್ ವಿರೋಧಿ ಚಟುವಟಿಕೆಗಳನ್ನು ಪ್ರೇರೇಪಿಸಿತ್ತು. ವಿದೇಶದಲ್ಲಿ ಸ್ಥಾಪನೆಗೊಂಡ ಗಾದರ್ ಪಾರ್ಟಿ ಭಾರತೀಯ ಸ್ವಾತಂತ್ರ್ಯ ಚಳುವಳಿಗೆ ಅಂತರಾಷ್ಟ್ರೀಯ ಬೆಂಬಲ ದೊರಕಿಸಿಕೊಟ್ಟಿತ್ತು. ಇದು ಕ್ರಾಂತಿಕಾರಿ ಸ್ವಭಾವದ ತೀವ್ರ ಚಳುವಳಿಯಾಗಿರುವುದರಿಂದ ಭಾರತದ ಸ್ವಾತಂತ್ರ್ಯ ಹೋರಾಟಗಾರರು ಮತ್ತು ಕ್ರಾಂತಿಕಾರಿಗಳಿಗೆ ಪ್ರೇರಣೆ ನೀಡಿತ್ತು. ಅಲ್ಲದೆ, ಗಾದರ್ ರೈಟ್ಸ್‌ಗಳು 1915ರಲ್ಲಿ ಭಾರತಕ್ಕೆ ಬಂದು ಸ್ವಾತಂತ್ರ್ಯ ಚಳುವಳಿಗಾರರಿಗೆ ಬೆಂಬಲ ನೀಡುವುದರ ಮೂಲಕ ಬ್ರಿಟಿಷ್ ಸೇನೆಯಲ್ಲಿ ಬಂಡಾಯ ಪ್ರಚೋದಿಸಲು ಪ್ರಯತ್ನಿಸಿದ್ದರು. ಆದರೆ, ಮಾಹಿತಿ ಲೀಕ್ ಆಗಿರುವುದರಿಂದ ಗಾದರ್ ಪಕ್ಷದ ಹೋರಾಟ ಯಶಸ್ವಿಯಾಗಲಿಲ್ಲ.

**ಹಿಂದೂ ಮಹಾಸಭಾ (1915):**

ಭಾರತದ ಹಿಂದೂ ಸಮಾಜದ ಹಕ್ಕುಗಳ ರಕ್ಷಣೆ, ಹಿಂದೂ ರಾಷ್ಟ್ರವಾದದ ಪ್ರಚಾರ ಮತ್ತು ಹಿಂದೂಗಳ ರಾಜಕೀಯ ಪ್ರಾತಿನಿಧ್ಯಕ್ಕಾಗಿ 1915 ರಲ್ಲಿ ಹಿಂದೂ ಮಹಾಸಭಾವನ್ನು ಮದನ್ ಮೋಹನ್ ಮಾಳವೀಯ ಮತ್ತು ಅವರ ಜೊತೆಗಿನ ಹಿಂದೂ ಸಂಘಟಕರು ಹರಿದ್ವಾರದಲ್ಲಿ ನಡೆದ ಕುಂಭಮೇಳ ಸಂದರ್ಭದಲ್ಲಿ ಸ್ಥಾಪಿಸಿದರು. ಭಾರತದ ಸ್ವಾತಂತ್ರ್ಯ ಚಳುವಳಿಯ ಸಂದರ್ಭದಲ್ಲಿ ಹಿಂದೂ ಮಹಾಸಭಾದ ಪಾತ್ರ ಸಂಕೀರ್ಣ ಮತ್ತು ಮಿಶ್ರ ಸ್ವರೂಪ ಹೊಂದಿತ್ತು. ಹಿಂದೂ ಮಹಾಸಭಾದ ಸಕಾರಾತ್ಮಕ ಕೊಡುಗೆಗಳ ಜೊತೆಗೆ ವಿವಾದಾತ್ಮಕ ಅಂಶಗಳು ಸೇರಿಕೊಂಡಿದ್ದವು. 1915 ರಿಂದ 1920 ಅವಧಿಯಲ್ಲಿ ಹಿಂದೂ ಮಹಾಸಭೆಯ ಕೆಲವು ಪ್ರಮುಖ ನಾಯಕರುಗಳಾದ ಪಂಡಿತ ಮದನ್ ಮೋಹನ್ ಮಾಳವೀಯ, ಲಾಲಾ ಲಜಪತ್ ರಾಯ್, ನಾರಾಯಣರಾವ್ ಮುಂತಾದವರು ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ ನೊಂದಿಗೆ ಸಹಕರಿಸಿ ಭಾರತದ ಸ್ವಾತಂತ್ರ್ಯ ಚಳುವಳಿಯಲ್ಲಿ ಸಕ್ರಿಯವಾಗಿ ಭಾಗವಹಿಸಿದ್ದರು. ಆದರೆ, 1920ರ ನಂತರ ಹಿಂದೂ ಮಹಾಸಭಾವು ತನ್ನ ಸೈದ್ಧಾಂತಿಕ ಭಿನ್ನಾಭಿಪ್ರಾಯಗಳಿಂದ ಗಾಂಧೀಜಿಯವರ ಅಸಹಕಾರ ಚಳುವಳಿ ಮತ್ತು ಅಹಿಂಸಾತ್ಮಕ ಹೋರಾಟಗಳಿಂದ ದೂರ ಉಳಿಯಿತು. ಆದರೆ, ಭಾರತದ ಸ್ವಾತಂತ್ರ್ಯ ಹೋರಾಟದ ಸಮಯದಲ್ಲಿ ಹಿಂದೂ ಮಹಾಸಭಾವು ಬೇರೆ ರೀತಿಯ ರಾಜಕೀಯ ಮತ್ತು ಕ್ರಾಂತಿಕಾರಕ ಚಟುವಟಿಕೆಗಳಲ್ಲಿ ಭಾಗಿಯಾಗಿ ಹಿಂದೂ ಸಮಾಜಕ್ಕೆ ದೇಶವ್ಯಾಪಿ ರಾಜಕೀಯ ವೇದಿಕೆಯನ್ನು ನೀಡಿತು.

ಸ್ವಾತಂತ್ರ್ಯ ಚಳುವಳಿಯಲ್ಲಿ ಬಹುಮುಖ್ಯ ಪಾತ್ರ ವಹಿಸಿದ ರಾಷ್ಟ್ರೀಯ ಕಾಂಗ್ರೆಸ್ 1938ರಲ್ಲಿ ಹಿಂದೂ ಮಹಾಸಭಾವನ್ನು ಕೋಮುವಾದಿ ಪಕ್ಷವೆಂದು ಕಪ್ಪು ಪಟ್ಟಿಗೆ ಸೇರಿಸಿತ್ತು. ಆದರೆ, ಇದಾದ ನಂತರ ವಿ.ಡಿ. ಸಾವರ್ಕರ್ ಅವರ ನೇತೃತ್ವದಲ್ಲಿ ಕಾಂಗ್ರೆಸ್ ನ ಜಾತ್ಯತೀತ ತತ್ವಕ್ಕೆ ವಿರುದ್ಧವಾಗಿ ಹಿಂದೂ ಪ್ರಾಬಲ್ಯದೊಂದಿಗೆ ಹಿಂದೂ ರಾಷ್ಟ್ರವಾದಿ ವಿಚಾರಗಳನ್ನು ಪ್ರತಿಪಾದಿಸುವುದರ ಮೂಲಕ ಹಿಂದೂ ಮಹಾಸಭಾ ಪೂರ್ಣ ಪ್ರಮಾಣದ ರಾಜಕೀಯ ಪಕ್ಷವಾಯಿತು. ವಿಚಿತ್ರವೆಂದರೆ ಹಿಂದೂ ಮಹಾಸಭಾವು 1940ರ ದಶಕದಲ್ಲಿ ಮುಸ್ಲಿಂ ಲೀಗ್‌ನ ಜೊತೆಗೆ ಸರಕಾರದಲ್ಲಿ ಪಾಲ್ಗೊಂಡಿತ್ತು. ಸ್ವಾತಂತ್ರ್ಯ ಚಳುವಳಿಯ ಸಂದರ್ಭದಲ್ಲಿ ಉದಯಿಸಿದ ಹಿಂದೂ ಮಹಾಸಭಾವು ಬ್ರಿಟಿಷರ ವಿರುದ್ಧದ ಹೋರಾಟದಲ್ಲಿ ಭಾಗವಹಿಸಿದ್ದರೂ ಜಾತ್ಯತೀತತೆ, ಹಿಂದೂ–ಮುಸ್ಲಿಂ ಐಕ್ಯತೆ, ಕಾಂಗ್ರೆಸ್‌ನ ಧೋರಣೆಗಳನ್ನು ಮತ್ತು ಹೋರಾಟಗಳನ್ನು ಬಲವಾಗಿ ವಿರೋಧಿಸುತ್ತಿತ್ತು. ಅಷ್ಟೇ ಅಲ್ಲ ದೇಶ ವಿಭಜನೆಯ ಮೂಲಕ ಸ್ವಾತಂತ್ರ್ಯ ಹೊಂದುವುದನ್ನು ತೀವ್ರವಾಗಿ ಖಂಡಿಸುತ್ತಿತ್ತು. ಮಹಾತ್ಮಾ ಗಾಂಧೀಜಿ ಹತ್ಯೆಯ ಪ್ರಕರಣದಲ್ಲಿ ನ್ಯಾಯಾಲಯವು ಹಿಂದೂ ಮಹಾಸಭಾವನ್ನು ಅಪರಾಧಿಯನ್ನಾಗಿ ತೀರ್ಪು ಕೊಡಲಿಲ್ಲವಾದರೂ ಗಾಂಧೀಜಿ ಹತ್ಯೆ ಮಾಡಿದ ನಾಥೂರಾಮ್ ಗೋಡ್ಸೆ ಅವರು ಹಿಂದಿನ ದಿನಗಳಲ್ಲಿ ಹಿಂದೂ ಮಹಾಸಭಾದೊಂದಿಗೆ ಸಂಪರ್ಕ ಹೊಂದಿರುವುದರಿಂದ ಭಾರತ ಸ್ವಾತಂತ್ರ್ಯದ ನಂತರ ಅದರ ಪ್ರಭಾವ ಕಡಿಮೆಯಾಯಿತು. ಪ್ರಸ್ತುತ ಹಿಂದೂ ಮಹಾಸಭಾ ರಾಜಕೀಯ ಪಕ್ಷದ ಸ್ಥಾನಮಾನ ಹೊಂದಿದ್ದರೂ ದೇಶದಾದ್ಯಂತ ಅದರ ಪ್ರಭಾವ ಮತ್ತು ಪ್ರಾತಿನಿಧ್ಯ ಬಹಳ ಕಡಿಮೆಯಾಗಿದೆ.

**ಜಸ್ಟಿಸ್ ಪಕ್ಷ (1916):**

ಭಾರತೀಯ ಸಾಮಾಜಿಕ ಶೋಷಣೆಗೆ ಒಳಗಾದ ದೀನ–ದಲಿತರು ಮತ್ತು ಬ್ರಾಹ್ಮಣೇತರ ಸಮುದಾಯಗಳ ಹಿತಾಸಕ್ತಿ ರಕ್ಷಣೆ, ರಾಜಕೀಯ ಮತ್ತು ಸಾಮಾಜಿಕ ಸಮಾನತೆ ಹಾಗೂ ಹಕ್ಕುಗಳಿಗಾಗಿ 1916ರಲ್ಲಿ ಸೌತ್ ಇಂಡಿಯನ್ ವೆಲ್‌ಫೇರ್ ಅಸೋಸಿಯೇಷನ್ ಅಸ್ತಿತ್ವಕ್ಕೆ ಬಂದು ಮುಂದೆ ಜಸ್ಟಿಸ್ ಪಾರ್ಟಿ ಎಂದೇ ಪ್ರಸಿದ್ಧವಾಯಿತು. ಡಾ. ಟಿ.ಎಂ. ನೈರ್, ಪಿ. ತ್ಯಾಗರಾಜ್ ಚೆಟ್ಟಿಯಾರ್, ಸಿ.ಎನ್. ಮೊದಲಿಯಾರ್, ಪಿ.ಎಸ್. ಕುಮಾರಸ್ವಾಮಿ, ವಿನ್ಸೆಂಟ್ ಚಿನಪಯ್ಯನ್, ಇ.ವಿ. ರಾಮಸ್ವಾಮಿ ಮುಂತಾದವರು ಜಸ್ಟಿಸ್ ಪಕ್ಷದ ನಾಯಕರಾಗಿದ್ದರು. ಜಸ್ಟಿಸ್ ಪಕ್ಷವು ಸ್ವಾತಂತ್ರ್ಯ ಚಳುವಳಿಯ ಸಮಯದಲ್ಲಿ ಹುಟ್ಟಿಕೊಂಡಿದ್ದರೂ ಬ್ರಿಟಿಷರ ವಿರುದ್ಧ ನೇರ ಹೋರಾಟಕ್ಕೆ ಇಳಿಯಲಿಲ್ಲ. ರಾಜಕೀಯ ಸ್ವಾತಂತ್ರ್ಯಕ್ಕಿಂತ ಸಾಮಾಜಿಕ ಸ್ವಾತಂತ್ರ್ಯ ಅವಶ್ಯಕ ಎಂದು ಭಾರತದಲ್ಲಿ ಪ್ರಥಮಬಾರಿಗೆ ಬ್ರಾಹ್ಮಣೇತರರಾದ ಶೂದ್ರರು ಮತ್ತು ಹಿಂದುಳಿದ ಜಾತಿಗಳಿಗೆ ಶಿಕ್ಷಣ ಮತ್ತು ಉದ್ಯೋಗದಲ್ಲಿ ಮೀಸಲಾತಿ ಪರಿಚಯಿಸಿ ಸಾಮಾಜಿಕ ನ್ಯಾಯದ ಪರಿಕಲ್ಪನೆಗೆ ಅಡಿಪಾಯ ಹಾಕಲಾಯಿತು. ಜಸ್ಟಿಸ್ ಪಕ್ಷವು ಚುನಾವಣೆಯಲ್ಲಿ ಭಾರತದಲ್ಲಿ ಬ್ರಿಟಿಷರು ಅನುಮತಿಸಿದ ಮೊದಲ ಜವಾಬ್ದಾರಿಯುತ ಸರಕಾರವನ್ನು ರಚಿಸಿದ ರಾಜಕೀಯ ಪಕ್ಷ ಎಂಬ ಹೆಗ್ಗಳಿಕೆಗೆ ಪಾತ್ರವಾಯಿತು. ಆದರೆ, 1937ರ ಚುನಾವಣೆಯಲ್ಲಿ ರಾಷ್ಟ್ರೀಯ ಕಾಂಗ್ರೆಸ್‌ನ ಪ್ರಾಬಲ್ಯದಿಂದ ಇದರ ಪ್ರಭಾವ ಕಡಿಮೆಯಾಯಿತು. 1940ರ ದಶಕದಲ್ಲಿ ಪೆರಿಯಾರ್ ನೇತೃತ್ವದ ದ್ರಾವಿಡ ಕಳಗಂ ಚಳುವಳಿಯೊಂದಿಗೆ ವಿಲೀನವಾಯಿತು.

**ಭಾರತೀಯ ಕಮ್ಯೂನಿಸ್ಟ್ ಪಕ್ಷ (1925):**

1917ರ ರಷ್ಯಾ ಕ್ರಾಂತಿ ಪ್ರಪಂಚದಾದ್ಯಂತ ಕಮ್ಯೂನಿಸ್ಟ್ ಚಳುವಳಿಗೆ ಪ್ರೇರಣೆ ನೀಡಿತು. ಭಾರತದಲ್ಲಿ ಕಮ್ಯೂನಿಸ್ಟ್ ಪಕ್ಷದ ಚಟುವಟಿಕೆಗಳು 1920ರಿಂದಲೇ ಆರಂಭವಾಗಿತ್ತು. ಮಾನವೇಂದ್ರ ನಾಥ ರಾಯ್ (ಎಂ.ಎನ್. ರಾಯ್) ಅವರು 1920ರಲ್ಲಿ ವಿಶ್ವದ ಮೊದಲ

ಭಾರತೀಯ ಕಮ್ಯೂನಿಸ್ಟ್ ಗುಂಪನ್ನು ತಾಷ್ಕೆಂಟ್‌ನಲ್ಲಿ ಸಂಘಟಿಸಿ, ಭಾರತದ ಕಮ್ಯೂನಿಸ್ಟ್ ಚಳುವಳಿಯ ತತ್ವಗಳ ಶಿಲ್ಪಿ ಎನಿಸಿಕೊಂಡರು. ಆದರೆ, 1925 ಡಿಸೆಂಬರ್ 26ರಂದು ಕಾನ್ಪುರ ಕಮ್ಯೂನಿಸ್ಟ್ ಸಮ್ಮೇಳನದಲ್ಲಿ ಭಾರತೀಯ ಕಮ್ಯೂನಿಸ್ಟ್ ಪಕ್ಷ ಅಧಿಕೃತವಾಗಿ ಅಸ್ತಿತ್ವಕ್ಕೆ ಬಂದಿತು. ಕಾನ್ಪುರದಲ್ಲಿ ಸಮ್ಮೇಳನವನ್ನು ಸಂಘಟಿಸಿದ ಸತ್ಯಭಕ್ತ ಎಂಬುವರನ್ನು ಭಾರತೀಯ ಕಮ್ಯೂನಿಸ್ಟ್ ಪಕ್ಷದ ಸ್ಥಾಪಕರು ಎಂದು ಪರಿಗಣಿಸಲಾಗುತ್ತದೆ. ಕಾರ್ಲ್ ಮಾರ್ಕ್ಸ್ ಮತ್ತು ಲೆನಿನ್‌ರ ಸಮಾಜವಾದಿ ವಿಚಾರಗಳಿಂದ ಪ್ರಭಾವಿತರಾದ ಭಾರತದ ಸಮಾಜವಾದಿ ಕಾರ್ಮಿಕ ನಾಯಕರು ಭಾರತದಲ್ಲಿ ಕಾರ್ಮಿಕರ ಮುಷ್ಕರಗಳನ್ನು, ರೈತ ಚಳುವಳಿಗಳನ್ನು ಮತ್ತು ಆರ್ಥಿಕ ಅನ್ಯಾಯದ ವಿರುದ್ಧ ಹೋರಾಟಗಳನ್ನು ಸಂಘಟಿಸುವುದರ ಮೂಲಕ ಸ್ವಾತಂತ್ರ್ಯ ಚಳುವಳಿಯಲ್ಲಿ ಬ್ರಿಟಿಷರ ಆಳ್ವಿಕೆಯನ್ನು ಅಸ್ಥಿರಗೊಳಿಸಲು ಪ್ರಯತ್ನಿಸಿದರು. ಎಂ.ಎನ್. ರಾಯ್, ಅಬನಿ ಮುಖರ್ಜಿ, ಎಸ್.ವಿ. ಘಾಟೆ, ಎಸ್.ಎ. ಡಾಂಗೆ, ಮುಜಾಫರ್ ಅಹಮದ್, ಬಿ.ಟಿ. ರಣದಿವೆ, ಪಿ.ಸಿ. ಜೋಷಿ, ಅಜಯ್ ಘೋಷ್, ಶೌಕತ್ ಉಸ್ಮಾನಿ, ಜಮಲುದ್ದೀನ್ ಮುಂತಾದವರು ಭಾರತೀಯ ಕಮ್ಯೂನಿಸ್ಟ್ ಪಕ್ಷದ ನಾಯಕರಾಗಿದ್ದರು. ಸ್ವಾತಂತ್ರ್ಯ ಚಳುವಳಿಯಲ್ಲಿ ಭಾರತೀಯ ಕಮ್ಯೂನಿಸ್ಟ್ ಪಕ್ಷ ಬ್ರಿಟಿಷರ ಆಡಳಿತವನ್ನು ಸಾಮ್ರಾಜ್ಯಶಾಹಿ ಮತ್ತು ಶೋಷಕ ವ್ಯವಸ್ಥೆ ಎಂದು ತೀವ್ರವಾಗಿ ವಿರೋಧಿಸಿತು. ತನ್ನ ಕ್ರಾಂತಿಕಾರಕ ಚಟುವಟಿಕೆಗಳ ಮೂಲಕ ಭಾರತೀಯ ಕ್ರಾಂತಿಕಾರಿಗಳಿಗೆ ಸ್ಫೂರ್ತಿಯಾಯಿತು. ಭಾರತದಲ್ಲಿ ಕಾರ್ಮಿಕ ಮತ್ತು ರೈತರ ಹೋರಾಟವನ್ನು ಸ್ವಾತಂತ್ರ್ಯ ಚಳುವಳಿಯ ಮೂಲಕ ಸಂಘಟಿಸಿತ್ತು. ಸ್ವತಂತ್ರ ಭಾರತದಲ್ಲಿ ಕಮ್ಯೂನಿಸ್ಟ್ ಪಕ್ಷ ಕೇರಳದಲ್ಲಿ ನಂಬೂದರಿಪಾದ್ ನೇತೃತ್ವದಲ್ಲಿ ಪ್ರಜಾಸತ್ತಾತ್ಮಕ ಮತದಾನದ ಮೂಲಕ ಮೊದಲ ಬಾರಿಗೆ ಕಮ್ಯೂನಿಸ್ಟ್ ಸರಕಾರ ಅಸ್ತಿತ್ವಕ್ಕೆ ಬಂದಿತು ಮತ್ತು 1950 ದಶಕದಿಂದ ಬಹುತೇಕ ಅವಧಿಗಳಲ್ಲಿ ಕೇಂದ್ರ ಹಾಗೂ ಅನೇಕ ರಾಜ್ಯಗಳಲ್ಲಿ ರಚನಾತ್ಮಕ ವಿರೋಧ ಪಕ್ಷವಾಗಿ ಕಾರ್ಯನಿರ್ವಹಿಸಿತು. ಆದರೆ ಅಂತರಾಷ್ಟ್ರೀಯ ಕಮ್ಯೂನಿಸ್ಟ್ ಚಳುವಳಿಯ ಭಿನ್ನಾಭಿಪ್ರಾಯಗಳಿಂದ ಭಾರತದಲ್ಲಿ 1964ರಲ್ಲಿ ಕಮ್ಯೂನಿಸ್ಟ್ ಪಕ್ಷ ವಿಭಜನೆಯಾಗಿ ಸಿ.ಪಿ.ಐ ಮತ್ತು ಸಿ.ಪಿ.ಐ (ಎಂ) ಎಂಬ ಎರಡು ಪಕ್ಷಗಳಾದವು.

**ಸ್ವತಂತ್ರ ಕಾರ್ಮಿಕ ಪಕ್ಷ (1937):**

ಡಾ. ಬಿ. ಆರ್. ಅಂಬೇಡ್ಕರ್ ಅವರು ಕಾರ್ಮಿಕರು, ರೈತರು ಮತ್ತು ಹಿಂದೂ ಸಮಾಜದ ಶೋಷಿತ ವರ್ಗಗಳ ಹಕ್ಕುಗಳಿಗಾಗಿ ರಾಜಕೀಯ ರಕ್ಷಣೆ ಹೊಂದಲು 1937 ರಲ್ಲಿ ಸ್ವತಂತ್ರ ಕಾರ್ಮಿಕ ಪಕ್ಷವನ್ನು ಸ್ಥಾಪಿಸಿದರು. ಇದರಿಂದ ಡಾ. ಬಿ. ಆರ್. ಅಂಬೇಡ್ಕರ್ ಅವರ ಸಾಮಾಜಿಕ ನ್ಯಾಯದ ಹೋರಾಟಕ್ಕೆ ರಾಜಕೀಯ ಬಲ ಸೇರ್ಪಡೆಗೊಂಡಿತು. ಸ್ವತಂತ್ರ ಕಾರ್ಮಿಕ ಪಕ್ಷವು 1937ರ ಬಾಂಬೆ ಪ್ರಾಂತ್ಯದ ವಿಧಾನ ಸಭೆಯಲ್ಲಿ ಸ್ಪರ್ಧಿಸಿ ಹದಿನೈದು ಸ್ಥಾನಗಳಲ್ಲಿ ಜಯ ಸಾಧಿಸಿತು. ಆದರೆ 1942ರಲ್ಲಿ ಶೆಡ್ಯೂಲ್ಡ್ ಕ್ಯಾಸ್ಟ್ ಫೆಡರೇಷನ್ ರಚನೆಯೊಂದಿಗೆ ಸ್ವತಂತ್ರ ಕಾರ್ಮಿಕ ಪಕ್ಷದ ಕಾರ್ಯ ವಿರಾಮಗೊಂಡಿತು.

**ಪರಿಸಮಾಪ್ತಿ:**

ಭಾರತದ ಸ್ವಾತಂತ್ರ್ಯ ಸಂಗ್ರಾಮವು ಇಡೀ ವಿಶ್ವದಲ್ಲಿಯೇ ಅತ್ಯಂತ ಪ್ರಮುಖವಾದ ಜನಾಂದೋಲನವೆಂದು ಪ್ರಚಲಿತವಾಗಿದೆ. ಸ್ವಾತಂತ್ರ್ಯ ಚಳುವಳಿಯು ಬ್ರಿಟಿಷ್ ಸಾಮ್ರಾಜ್ಯದಿಂದ ಸ್ವಾತಂತ್ರ್ಯವನ್ನು ಹೊಂದಲು ಭಾರತೀಯರು ನಡೆಸಿದ ಸಂಘಟಿತ ಹೋರಾಟವಾಗಿದೆ. ವ್ಯಾಪಾರಕ್ಕಾಗಿ ಭಾರತಕ್ಕೆ ಬಂದ ಬ್ರಿಟಿಷರು 1757ರ ಪ್ಲಾಸಿ ಕದನದ ಮೂಲಕ ಭಾರತದ ರಾಜಕೀಯ ಅಧಿಕಾರವನ್ನು ಕಸಿದುಕೊಂಡು 1857 ರವರೆಗೆ ಅಂದರೆ ನೂರು ವರ್ಷಗಳ

ಕಾಲ ಶೋಷಣೆ, ದಬ್ಬಾಳಿಕೆ ಮತ್ತು ಭ್ರಷ್ಟಾಚಾರದ ಮೂಲಕ ಕಂಪನಿಯ ಆಡಳಿತ ಮುಂದುವರೆದಿತ್ತು. ಆದರೆ, 1857ರಲ್ಲಿ ನಡೆದ ಪ್ರಥಮ ಸ್ವಾತಂತ್ರ್ಯ ಸಂಗ್ರಾಮದಿಂದ 1947ರ ಭಾರತದ ಸ್ವಾತಂತ್ರ್ಯದವರೆಗೆ ಅಂದರೆ ನೂರು ವರ್ಷಗಳ ಕಾಲ ಬ್ರಿಟಿಷರೊಂದಿಗೆ ನಡೆದ ಸಂಘರ್ಷದಲ್ಲಿ ಪತ್ರಿಕೆಗಳು, ಸಂಘ-ಸಂಸ್ಥೆಗಳು, ಕ್ರಾಂತಿಕಾರಿ ಗುಂಪುಗಳು ಮತ್ತು ರಾಜಕೀಯ ಪಕ್ಷಗಳು ಉದಯಿಸಿ ಭಾರತದ ಸ್ವಾತಂತ್ರ್ಯ ಹೋರಾಟಕ್ಕೆ ತಮ್ಮದೇ ಆದ ಕೊಡುಗೆಗಳನ್ನು ನೀಡಿವೆ.

**ಪರಾಮರ್ಶನ ಗ್ರಂಥಗಳು:**


1. ಗಂಗಾಧರ ಪಿ.ಎಸ್., ಭಾರತದ ರಾಷ್ಟ್ರೀಯ ಚಳುವಳಿ ಮತ್ತು ಸಂವಿಧಾನಾತ್ಮಕ ಬೆಳವಣಿಗೆ.
2. ಉಮಾದೇವಿ., ಭಾರತದ ರಾಷ್ಟ್ರೀಯ ಚಳುವಳಿ ಮತ್ತು ಸಂವಿಧಾನಾತ್ಮಕ ಬೆಳವಣಿಗೆ.
3. ರಾಜಶೇಖರ. ಎಚ್.ಎಮ್., ಭಾರತದ ಸಂವಿಧಾನ ಮತ್ತು ಸರಕಾರ.
4. ಎಲ್.ಎಚ್. ಕಲ್ಮಠ, ಜೆ.ಬಿ. ಶೀಲವಂತರ., ಭಾರತದ ಸಂವಿಧಾನ ಮತ್ತು ರಾಜಕೀಯ.
5. ಲೋಹಿತಾಶ್ವ ಎಚ್.ಸಿ., ರಾಜ್ಯಶಾಸ್ತ್ರ.
6. ಸುರೇಶಕುಮಾರ ಎಮ್.ಎನ್., ಪೂರ್ಣಿಮಾ ಜಿ.ಆರ್., ರಾಜಕೀಯ ಚಿಂತಕರು ವಿದ್ಯಮಾನಗಳು ಮತ್ತು ವಿಧಾನಗಳು.



**Funding:**

This study was not funded by any grant.

**Conflict of interest:**

The Authors have no conflict of interest to declare that they are relevant to the content of this article.



**About the License:**

© The Authors 2024. The text of this article is open access and licensed under a Creative Commons Attribution 4.0 International License.